## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## **S.C. No.** 231/2022

**ಸಾಕ್ಷಿಯನ್ನು ದಿನಾಂಕ 24.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಂದೀಪ | ಪಿ.ಡಬ್ಲ್ಯೂ-18 |
| ತಂದೆಯ/ಗಂಡನ ಹೆಸರು | : | ಲೇಟ್ ಪುಟ್ಟಸ್ವಾಮಿಗೌಡ | ಸಿ.ಡಬ್ಲ್ಯೂ-21 |
| ವಯಸ್ಸು | : | 40 | |
| ಉದ್ಯೋಗ | : | ಖಾಸಗಿ ಉದ್ಯೋಗ | |
| ವಾಸ ಸ್ಥಳ | : | ಹುನುಗನಹಳ್ಳಿ<br>ಬೇಲೂರು ತಾಃ | |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

ನಾನು 2021ರಲ್ಲಿ ಮೈಸೂರಿನಲ್ಲಿ ಹೋಟೆಲ್ ನಡೆಸುತ್ತಿದ್ದೆ. ಆ ಕಾಲಕ್ಕೆ ನಾನು ಮೈಸೂರಿನ ಹೆಬ್ಬಾಳ ಏರಿಯಾದಲ್ಲಿ ಆರೋಪಿತರ ಮನೆಯಲ್ಲಿ ನೆಲ ಮಹಡಿಯಲ್ಲಿ 2021 ರಿಂದ 2022 ರ ವರೆಗೆ ಅಂದಾಜು 10 ತಿಂಗಳು ಬಾಡಿಗೆಗೆ ಇದ್ದೆವು. ಆರೋಪಿತರ ಪರಿಚಯ ಇರುತ್ತದೆ. ಆರೋಪಿತರು 1ನೇ ಮಹಡಿಯಲ್ಲಿ ವಾಸವಾಗಿದ್ದರು, ನಂಜಮ್ಮ ಇವರು 2ನೇ ಮಹಡಿಯಲ್ಲಿ ಒಂದು ಕೋಣೆಯಲ್ಲಿ ಇದ್ದರು, ಆರೋಪಿ ಅವಳ ಮಕ್ಕಳ ಜೊತೆಗೆ ವಾಸವಾಗಿದ್ದಳು. ಆರೋಪಿಯ ಮಗಳು

ಬಾಣಂತನಕ್ಕೆ ನಾಗಮ್ಮಳ ಮನೆಗೆ ಬಂದಿದ್ದಳು. ಮೃತ ನಂಜಮ್ಮ ಮತ್ತು ಆರೋಪಿತರ ಸಂಬಂಧ ಹೇಗೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ, ಆರೋಪಿತರು ಮತ್ತು ಮೃತ ನಂಜಮ್ಮಳ ಮಧ್ಯೆ ಗಲಾಟೆ ಆದ ವಿಷಯ ನನಗೆ ಗೊತ್ತಿಲ್ಲ. ನಂಜಮ್ಮ ಹೇಗೆ ಮೃತಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಂಜಮ್ಮ ಇವರನ್ನು ಯಾರು ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಂಜಮ್ಮ ಮರಣ ಹೊಂದಿದ ದಿನ ಮಧ್ಯಾಹ್ನ 12 ಗಂಟೆಗೆ ಗೊತ್ತಾಗಿ ನಾನು ಮನೆ ಬಳಿ ಹೋಗಿದ್ದೆ. ಆದರೆ ಆ ಕಾಲಕ್ಕೆ ನಂಜಮ್ಮಳಿಗೆ ಎಲ್ಲಿ ಗಾಯವಾಗಿತ್ತು ಎಂದು ಹತ್ತಿರ ಹೋಗಿ ನೋಡಿರುವುದಿಲ್ಲ. ಪೋಲಿಸರ ಮುಂದೆ ನಂಜಮ್ಮ ಹೇಗೆ ಮರಣ ಹೊಂದಿರುತ್ತಾರೆ ಮತ್ತು ಆರೋಪಿತರ ಜೊತೆ ನಂಜಮ್ಮಳ ಸಂಬಂಧ ಹೇಗಿತ್ತು ಎಂದು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀಸವಾಲು:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

ಆರೋಪಿತರ ಮತ್ತು ಮೃತ ನಂಜಮ್ಮ ಇವರ ಮಧ್ಯೆ ಮೇಲಿದ ಮೇಲೆ ಗಲಾಟೆ ಆಗುತ್ತಿತ್ತು ಎಂದರೆ ಸರಿಯಲ್ಲ. ಆರೋಪಿತರು ನಂಜಮ್ಮ ಇವರ ಮೇಲೆ ಹಲ್ಲೆ ಮಾಡಿ ಗಾಯ ಮಾಡಿದರು ಎಂದರೆ ಸರಿಯಲ್ಲ. ಮೃತ ನಂಜಮ್ಮ ಇವರು ತನ್ನ ಹೆಣ್ಣು

ಮಕ್ಕಳಿಗೆ ಮನೆಯಲ್ಲಿ ಪಾಲು ಕೊಡಬೇಕು ಎಂದು ಆರೋಪಿತರ ಜೊತೆ ಜಗಳ ಮಾಡಿ ಬೈಯ್ದು, ಶಾಪ ಹಾಕುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ನಂಜಮ್ಮ ಇವರ ಯೋಗ ಕ್ಷೇಮ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನಂಜಮ್ಮ ಇವಳ ಹೆಣ್ಣು ಮಕ್ಕಳು ಬಂದು ಅವಳ ಯೋಗ ಕ್ಷೇಮ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 02.10.2021 ರಂದು ಬೆಳಿಗ್ಗೆ 9.15 ಗಂಟೆಗೆ ಆರೋಪಿ ಮತ್ತು ಅವರ ಮಕ್ಕಳು ನಂಜಮ್ಮ ಇವಳ ಜೊತೆ ಗಲಾಟೆ ಮಾಡಿ ಸುಮ್ಮನಾಗಿದ್ದರು ಎಂದರೆ ಸರಿಯಲ್ಲ.

ದಿಃ 03.10.2021 ರಂದು ನಾನು ಕೆಲಸದಲ್ಲಿದ್ದಾಗ ಇದ್ದಾಗ, ಮಧ್ಯಾಹ್ನ 12.00 ಗಂಟೆಯ ಸಮಯದಲ್ಲಿ ನನ್ನ ಹೆಂಡತಿ ನನಗೆ ಕರೆ ಮಾಡಿ ನಂಜಮ್ಮ ಬಾಗಿಲು ಮುಚ್ಚಿಕೊಂಡು ಮಲಗಿದ್ದಾರೆ ಎಷ್ಟು ಕೂಗಿದರು ಬಾಗಿಲು ತೆರೆಯುತ್ತಿಲ್ಲಾ ಎಂದು ಹೇಳಿದರು ಎಂದರೆ ನಿಜ. ನಂತರ ಮದ್ಯಾಹ್ನ 12.20 ಕ್ಕೆ ನಾನು ಮನೆ ಬಳಿ ಹೋಗಿ ನೋಡಿದಾಗ ನಂಜಮ್ಮಳ ರೂಂನ ಕಿಟಕಿ ಗಾಜು ಒಡೆದಿತ್ತು ಮತ್ತು ನಂಜಮ್ಮ ಎಷ್ಟು ಕೂಗಿದರೂ ಎದ್ದಿರಲಿಲ್ಲವಾದ್ದರಿಂದ ಅವರು ತೀರಿಕೊಂಡಿರಬಹುದೆಂದು ಸುಮ್ಮನಾದೆವು ಎಂದರೆ ಸರಿಯಲ್ಲ. ನಂಜಮ್ಮಳಿಗೆ ಅವರ ಸೊಸೆ ಮತ್ತು ಮೊಮ್ಮಕ್ಕಳು ವೈಷಮ್ಯದ ಕಾರಣಕ್ಕೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ "ನಂಜಮ್ಮ ಹಾಗೂ ನಾಗಮ್ಮನವರ

ಕುಟುಂಬಕ್ಕೂ ---------------------------------- ತಮ್ಮ ಮುಂದೆ ತಿಳಿಸಿರುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ27 ಎಂದು ಗುರುತಿಸಿದೆ. ನನಗೆ ಎಲ್ಲ ವಿಷಯ ಗೊತ್ತಿದ್ದರೂ ಸಹ ಆರೋಪಿತರು ನಮ್ಮ ಬಾಡಿಗೆ ಮನೆ ಮಾಲೀಕರಾಗಿದ್ದರು ಎಂಬ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು